


ಕುಂದಾಪುರ ನಗರದ ಶಾಸ್ತ್ರೀ ವೃತ್ತ

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್–
**editorsu@sudha.co.in**

ಮಸ್ತ್ ಗ್ವಾಯ್ ಹಣ್ಣು, ಮಾಯಿನ್ ಹಣ್ಣು, ಹಲಸಿನಣ್ಣು ಆತ್ತ್ ಅದನ್ನ್ ತಿಂಬುದು, ಹಪ್ಪಳ, ಸೆಂಡಿಗೆ ಮಾಡುದು ದೊಡ್ಡ ಸಂಭ್ರಮ. ಬೆವರಿನ ವಾಸ್ನೆಗೆ ಪ್ರಕೃತಿ ನೀಡುವ ಪರಿಮಳವೆಂದರೆ ನಮ್ಮೂರ ಮಲ್ಲಿಗೆ. ಬೇರೆ ಕಡೆ ಮಲ್ಲಿಗೆ ಹೂಗನ್ನು ಕೆಜಿ, ಗ್ರಾಂ, ಮಾರು ಮೊಳ ಲೆಕ್ಕದಲ್ಲಿ ಮಾರಾಟ ಮಾಡ್ರೆ ನಮ್ಮಲ್ಲಿ 100 ಮೊಗ್ಗು ಸಾವಿರ ಮೊಗ್ಗು ಲೆಕ್ಕದಲ್ಲಿ ಮಾರಾಟ ಮಾಡ್ತ್ರು. ಬೆಲಿ ಸಿಕ್ಕಾಪಟ್ಟೆ ಜಾಸ್ತಿಯಾರೂ ಈ ಮಲ್ಲಿಗೆಗೆ ಮನಸೋಲದವರು ಇಲ್ಯೆ.

ನಮ್ಮೂರಿನ್ ಮಳಿಗಾಲ ಬಾರೀ ಜೋರು. ಬ್ಯಾಸ್ಗಿ ಜೋರ್ ಆತಾ ಇದ್ದಂಗೆ ಭೂಮಿ ಬಿರಿದು ಹಪಹಪಿಸ್ಕಾರೆ, ಎಲ್ಲೆಲ್ ಇದ್ದ್ ಮೋಡಗಳ್ ಎಲ್ಲಾ ಗಾಳಿಯ ರಭಸಕ್ಕೆ ಒಟ್ಟಾಯ್ ಗುಡುಗು, ಮಿಂಚು ಸಿಡಿಲಿನ ಆರ್ಭಟ ಸುರುವಾತ್. ಸಿಡಿಲಿಗೆ ತೆಂಗಿನ ಮರಗಳು ಸುಟ್‌ಹೋತ್, ಕರೆಂಟ್ ಕಂಬಗಳು ನೆಲಕ್ಕ್ ಉರುಳುತ್, ಮನೆಯ ಕರೆಂಟ್ ಉಪಕರಣಗಳು ಎಷ್ಟ್ ಜಾಗ್ರತಿ ಮಾಡ್‌ರೂ ಹಾಳಾತ್. ಆಗ ರಿಪೇರಿ ಮಾಡುವವರಿಗೆ ದೆಸಿ. ಹಿರಿಯರು ಹೇಳೋ 27 ಮಳೆ ನಕ್ಷತ್ರದ ಮಳೆಗಳೂ ಆತ್ತ್. ಅದಕ್ಕೆಲ್ಲಾ ಒಂದೊಂದು ನಾಣ್ಣುಡಿ ಇತ್ತೆ.

ಮೃಗಶಿರ ಮಳೆ ಮೃಗಗಳು ತಲೆ ಎತ್ತುಕಾಯ್‌ದಾಂಗೆ ಬರುತ್, ಆರ್ದ್ರ ಮಳೆ ಅದರೆ ಆತ್ ಹೋದರೆ ಹೋತ್, ಪುನರ್ವಸು ಆರ್ಭಟದ ಮಳೆ ಪುನರಾರಂಭ, ಪುಷ್ಯ ಪುಸ್ ಪುಸ್ ಮಳೆ, ಆಶ್ಲೇಷ ಮಳೆ ನಾಗನಿಗೆ ತಂಪು ಮಾಡುತ್, ಚಿತ್ರ ಮಳೆ ವರುಣನ ಚಿತ್ತವಿದ್ದಂತೆ, ಸ್ವಾತಿ ಮಳೆಗೆ ಸಮುದ್ರದಲ್ಲಿ ಮುತ್ತು ತಯಾರಾಗುತ್, ಮಘಾ ಮಳೆಗೆ ಎಲ್ಲೆಡೆ ನೀರ್ ಮಗದ್ ಮಗದ್ ಬತ್ತ್, ಎಂದ್ ಹೇಳುದು. ಒಂದು ನಾಲ್ಕ್ ದಿನ ಜಿರಾಪಟ್ಟಿ ಮಳಿ ಬಂದ್ಗತಿಗೆ ಕೆರಿ ಬಾಮಿ ತೋಡು ಎಲ್ಲಾ ತುಂಬಿ ಹೋತ್ತ್. ಮರಗಿಡಗಳೆಲ್ಲಾ ಮೈತುಂಬಿ ಬೆಳಿತ್ ಎಲ್ಲಾ ಕಡಿ ಕಾಟು ಗಿಡಗಳು ಎಂತೆಂತದೂ ಹೂಗಳು ಅರಳುತ್ವೆ. ಬಗೆಬಗೆಯ ಅಣಬೆಗಳು ಭೂಮಿಲ್ ಕಾಣುತ್ವೋ. ಅನೇಕ ಜಾತಿಯ ಕ್ರಿಮಿಕೀಟಗಳು ಹುಟ್‌ಕಂಡ್ ಅವುಗಳ ಉಪದ್ರ ಒಂದೆರೆಡಲ್ವೆ. ನವಿಲಿನ ನರ್ತನ, ಪಕ್ಷಿಗಳ ಇಂಚರ, ಕಪ್ಪೆಗಳ ಅರಚಾಟ, ಕೀಟಗಳ ಝೇಂಕಾರ, ಮಿಂಚುಹುಳುಗಳ ಮಿಣುಕು ದೀಪ ಒಟ್ಟಿನಲ್ಲಿ ಹಗಲುರಾತ್ರಿ ಮಳೆಯ ಶಬ್ದದೊಟ್ಟಿಗೆ ಇವುಗಳ ಶಬ್ದಗಳೂ ಸೇರಿ ವಿವಿಧ ನಾದದ ಕಚೇರಿ ನೆಡಿತಿತ್ತೇನೋ ಅಂತ ಅನ್ಸತ್ತೆ.

ಒಂದೆರೆಡು ತಿಂಗಳು ಆರ್ಭಟದ ಮಳಿಬಂದ್ ನಟ್ಟಿ ಕಾರ್ಯ ಮುಗೀತಂಬೊತ್ತಿಗೆ ಸೋನೆ ಮಳಿ ಸುರುವಾತ್. ಆನಂತರ ಸ್ವಲ್ಪ ಬಿಸಿಲು ಬೆಳಕು ಇದ್ದಕ್ಕಿದ್ದಂತೆ ಮೋಡ ಮುಸುಕಿ ಕತ್ತಲಾಗಿ ಜೋರು ಮಳೆ ಬತತ್. ಇದಕ್ಕೆ ಮಳಿ ಕಸ್ಲು ಅಂತ್ ಹೇಳ್ತರು. ಮಳೆಗಾಲದಲ್ಲೂ ಆಟಿ ಹಬ್ಬ ಮಾಡಿ ಮಳೆಗಾಲದ ವಿಶೇಷ ಅಡುಗೆ ಮಾಡಿ ಚೆನ್ನೆಮಣೆ ಆಟಗಳಾಡಿ ಕುಸಿಯಾಗಿ ಮಳೆಗಾಲ ಕಳಿತ್ವೆ. ದೇವಸ್ಥಾನಗಳಲ್ಲಿ ಸ್ವಾಣಿ ಆರತಿ ಬಹಳ ವಿಶೇಷವಾಗಿ ಆಚರಿಸ್ತ್ರು. ಕಾಂಬುಕೆ ಎರಡು ಕಣ್ಣು ಸಾಲ್ದ್. ಆದರೆ ಮಳಿ ಜೊತೆ ಸಮುಂದ್ರದಾಗೆ ಚಂಡಮಾರುತ ಎದ್ದರೆ ಕಡಲ್ ಕೊರೆತ ಸುರುವಾತ್ತೆ. ಆಗ ಕಡಲ್ ಬದಿ ಇಪ್ಪೋರಿಗೆ ಬಾರಿ ಕಷ್ಟವೇ. ಎಂತ ಮಾಡುದು ಪ್ರಕೃತಿ ಮುಂದೆ ನಾವ್ ತಲೆ ಬಾಗುದೆ ಅಲ್ದಾ?

ಹೀಗೆ ನಿಧಾನವಾಗಿ ಮಳೆಗಾಲ ಕಳುಕು ಚಳಿ ಬತ್ತೆ. ಚಳಿ ಎಂದ್ರೆ ಮೈ ಕೊರಿ ಚಳಿ ಅಲ್ದ್. ತಾಪಮಾನ ಸ್ವಲ್ಪ ಕಮ್ಮಿ ಆತ್ತ್. ಉಣ್ಣೆ ಬಟ್ಟೆ ಕಂಬಳಿ ಬೇಕಂತಿಲ್ಲ. ಮೈ ಬೆವರು ಇರ್‌ತ್ತಿಲ್ಲ ಎಂಬುದೇ ಕುಸಿ. ಸೂರ್ಯೋದಯ, ಸೂರ್ಯಾಸ್ತ ಕಾಂಬುಕೆ ಚೆಂದ. ಬೆಳಗಿನ ಬಾಲರವಿ ಮಂಜಿನ ಪರದೆ ಸರಿಸಿ ಮರಗಿಡಗಳ ಎಲೆಗಳ ಮೇಲೆ ಇಬ್ಬನಿಯ ಮುತ್ತಿನ ಹಾರ ಪೋಣಿಸಿದ ಸೊಬಗು ಆಹಾ ಎಂತ ಸಾಪ್ ಇರುತ್ತೆ. ಮಳೆಗಾಲದಲ್ಲಿ ತಣಸ್ ಬಂದ ಬಟ್ಟೆ ಬರಿಗಳನ್ನು ದಿನಸಿ ಸಾಮಾನುಗಳನ್ನು ಬಿಸಿಲಿಗೆ ಹಾಕುವ ಕೆಲಸ. ಇದಕ್ಕೆ ಸ್ವಾತಿ ಬಿಸಿಲಿಗೆ ಹಾಕುದು ಅಂತ್ರು. ಈ ಸಮಯದಲ್ಲಿ ಎಲ್ಲೆಲ್ಲಿಂದಲೂ ಅನೇಕ ಜಾತಿಯ ಪಕ್ಷಿಗಳು ಸಂತಾನೋತ್ಪತ್ತಿಗೆ ನಮ್ಮೂರ ಕೆರೆಬದಿಗೆ ಬತ್ತೋ. ಈ ಸಮಿಕೆ ನಮ್ಮೂರಾಗೆ ಆಟದ ಹೊತ್ತ ಅಂದರೆ ಯಕ್ಷಗಾನ ನಡಿತ್. ನಾಗಮಂಡಲ, ದೈವಾರಾಧನೆ ಆತ್ತ್. ಆದ್ದರಿಂದ ಘಟ್ಟದ ಮೇಲಿದ್ ರ್ನವರು ಈ ಸಮಿಕೆ ಊರಿಗೆ ಬಂದ್ ದೈವ, ನಾಗನ ಪೂಜೆ ಮಾಡಿ ಹೋತ್ರು.

ಹ್ವಾಯ್ ಕಷ್ಟಟ್ಟ್ ಓದಿದ್ರ್ಯಾಲ್ದಾ ನಂಗ್ ಸಂತೋಸ ಆಯ್ತೆ. ನಿಮಗೆ ನಮ್ಮೂರಿನ್ ಯಾವ್ ಕಾಲ ಇಷ್ಟಾಯ್ತೋ ಆ ಕಾಲಕ್ಕ್ ಬನ್ನಿ ಅಡ್ಡಿ ಇಲ್ಲ. ನೀವ್ ಯಾವಾಗ್ ಬಂದ್ರೂ ನಮಗ್ಗೇನ್ ರಗಳಿಯಿಲ್ಲ. ಆಗ ನಮ್ ಭಾಷಿ ಕೇಣ್‌ಲಕ್ಕೆ. ಹ್ವಾಯ್, ಬಪ್ರೆಲೆ. ■

## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

